# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 926 |
| ಮಾನ್ಯ ಸದಸ್ಯರ ಹೆಸರು | ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 11.03.2026 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯಾದ್ಯಂತ ಪೋಡಿಗಾಗಿ ಬಾಕಿ ಇರುವ ಒಟ್ಟು ಅರ್ಜಿಗಳೆಷ್ಟು; ಕಳೆದ 3 ವರ್ಷದಿಂದ ಇತ್ಯರ್ಥಗೊಂಡಿರುವ ಮತ್ತು ತಿರಸ್ಕಾರಗೊಂಡಿರುವ ಅರ್ಜಿಗಳೆಷ್ಟು; ಬಾಕಿ ಇರುವ ಅರ್ಜಿಗಳಷ್ಟು;(ಜಿಲ್ಲಾವಾರು ವಿವರ ಒದಗಿಸುವುದು) | ರಾಜ್ಯಾದ್ಯಂತ ಪೋಡಿಗಾಗಿ ಬಾಕಿ ಇರುವ ಹಾಗೂ ಕಳೆದ 3 ವರ್ಷದಿಂದ ಇತ್ಯರ್ಥಗೊಂಡಿರುವ, ತಿರಸ್ಕಾರಗೊಂಡಿರುವ ಮತ್ತು ಪೋಡಿಗಾಗಿ ಬಾಕಿ ಇರುವ ಒಟ್ಟು ಅರ್ಜಿಗಳ ವಿವರ ಈ ಕೆಳಕಂಡಂತಿದೆ:<br><br>ಪ್ರಾ. ಶೀಲು / ಸ್ವೀಕೃತಿ / ಒಟ್ಟು / ವಿಲೇ / ಬಾಕಿ / ಅಳತೆ ತಿರಸ್ಕರಿಸಿ ರುವ ಅರ್ಜಿ ಗಳು / ಅಳತೆ ಪೂರ್ಣ ಗೊಳಿಸಿರುವ ಅರ್ಜಿ ಗಳು<br>143286 / 1088315 / 1231601 / 1020025 / 211576 / 3,56,393 / 6,63,632<br><br>ಜಿಲ್ಲಾವಾರು ವಿವರಗಳನ್ನು **ಅನುಬಂಧ**ದಲ್ಲಿ ನೀಡಿದೆ. |
| ಆ) | ಪೋಡಿಗಾಗಿ ಸಲ್ಲಿಕೆಯಾಗಿರುವ ಅರ್ಜಿಗಳ ಇತ್ಯರ್ಥ ವಿಳಂಬ ವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ವಿಳಂಬಕ್ಕೆ ಕಾರಣವೇನು; ಪ್ರಸ್ತುತ ಪೋಡಿ ಇತ್ಯರ್ಥಕ್ಕೆ ಅನುಸರಿಸುತ್ತಿರುವ ಮಾನದಂಡವೇನು; ಪೋಡಿ ಇತ್ಯರ್ಥಕ್ಕೆ ಪ್ರತ್ಯೇಕ ತಂಡ ಇದೆಯೇ; | ಪೋಡಿಗಾಗಿ ಸಲ್ಲಿಕೆಯಾಗಿರುವ ಅರ್ಜಿಗಳ ಇತ್ಯರ್ಥ ವಿಳಂಬವಾಗಿರುವುದಿಲ್ಲ. ಕಳೆದ ಎರಡು ವರ್ಷಗಳಿಂದ ಬಾಕಿ ಇರುವ ಪೋಡಿ ಪ್ರಕರಣಗಳ ಸಂಖ್ಯೆಯು ಹಿಂದಿನ ವರ್ಷಗಳಿಗೆ ತಾಳೆ ನೋಡಿದಾಗ ಗಣನೀಯವಾಗಿ ಕಡಿಮೆಯಾಗಿರುತ್ತದೆ. ಹಿಂದಿನ ವರ್ಷಗಳಲ್ಲಿ ಒಂದು ಕಡತದ ವಿಲೇ ಅವಧಿಯು ಸರಾಸರಿ 4 ರಿಂದ 10 ತಿಂಗಳ ಕಾಲಾವಧಿ ತೆಗೆದುಕೊಳ್ಳುತಿತ್ತು. ಪ್ರಸ್ತುತ ಈ ಅವಧಿಯು ಒಂದು ತಿಂಗಳಿಂದ ಎರಡು ತಿಂಗಳಿಗೆ ಸೀಮಿತಗೊಂಡಿರುತ್ತದೆ.<br><br>**ಪೋಡಿ ಪ್ರಕರಣಗಳು ಬಾಕಿ ಇರಲು ಪ್ರಮುಖ ಕಾರಣಗಳು :**<br><br>1. ಆಕಾರಬಂದು ಮತ್ತು ಪಹಣಿ, ಪಹಣಿ ಕಾಲಂ 3 ರ ವಿಸ್ತೀರ್ಣದ ವ್ಯತ್ಯಾಸಗಳಿರುವುದು.<br>2. ಮೂಲ ಭೂದಾಖಲೆಗಳು/ಕಂದಾಯ ದಾಖಲೆಗಳು ಶಿಥಿಲವಾಗಿದ್ದು ಅವುಗಳ ಪುನರ್ ನಿರ್ಮಾಣ ಮಾಡಲು ಹೆಚ್ಚಿನ ಕಾಲಾವಕಾಶ ಬೇಕಾಗುವುದು.<br>3. ಅಳತೆ ವೇಳೆ ಜಮೀನಿನ ಹಕ್ಕು ಮತ್ತು ಗಡಿ ವಿಚಾರದಲ್ಲಿ ತಕರಾರು ಮತ್ತು ನ್ಯಾಯಾಲಯದಲ್ಲಿ ವ್ಯಾಜ್ಯಗಳು ಇರುವುದು.<br>4. ಸರ್ಕಾರಿ/ಪರವಾನಗಿ ಭೂಮಾಪಕರುಗಳು ಪ್ರತಿ ಮಾಹೆ ನಿಗದಿತ ಗುರಿಯಂತೆ ಕೆಲಸ ನಿರ್ವಹಿಸುತ್ತಿದ್ದು, ಗುರಿಗಿಂತ ಹೆಚ್ಚಿನ ಅರ್ಜಿಗಳು ಸ್ವೀಕೃತಿ ಯಾಗುತ್ತಿರುವುದರಿಂದ ಬಾಕಿ ಉಳಿಯುತ್ತಿರುತ್ತವೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | **ಪೋಡಿ ಮಾಡಲು ಇರುವ ಮಾನದಂಡಗಳು ಈ ಕೆಳಗಿನಂತಿವೆ:**<br>1. ಯಾವುದೇ ರೀತಿಯ ಅಳತೆ ಕೋರಿ ಅರ್ಜಿ ಸಲ್ಲಿಸಲು ಪಹಣಿಯಲ್ಲಿನ ಹಕ್ಕುದಾರರಾಗಿರಬೇಕು ಮತ್ತು ಅವರು ಖುದ್ದು ಅಥವಾ ಅವರಿಂದ ದೃಢೀಕರಣ ಪತ್ರ ಪಡೆದಿರುವ ಅಧಿಕೃತ ಪ್ರತಿನಿಧಿಗಳು ಭಾವಚಿತ್ರ ಸಹಿತ ಗುರುತಿನ ಚೀಟಿಯೊಂದಿಗೆ ಸಂಬಂಧಿಸಿದ ಹೋಬಳಿ ಮಟ್ಟದ ಅಟಲ್ ಜಿ ಜನಸ್ನೇಹಿ ಕೇಂದ್ರದಲ್ಲಿ ಅಗತ್ಯ ಮಾಹಿತಿಯೊಂದಿಗೆ ಅರ್ಜಿ ದಾಖಲಿಸಿ, ನಿಗದಿ ಪಡಿಸಿರುವ ಶುಲ್ಕವನ್ನು ಭರಿಸಬೇಕು.<br>2. ನಂತರ ಪ್ರಕರಣವನ್ನು ಅಳತೆಗೆ ವಿತರಿಸಲು ಜಮೀನಿನ ಆಕಾರಬಂದ್ ಮತ್ತು ಪಹಣಿಗಳಲ್ಲಿ ದಾಖಲಾಗಿರುವ ವಿಸ್ತೀರ್ಣ ತಾಳೆಯಾಗುತ್ತಿರಬೇಕು.<br>3. ಜಮೀನಿನ ಪಹಣಿಯ ಕಾಲಂ 3 ಮತ್ತು 9 ರಲ್ಲಿಯ ವಿಸ್ತೀರ್ಣ ತಾಳೆಯಾಗುತ್ತಿರಬೇಕು.<br>4. ಸಂಬಂಧಿಸಿದ ಜಮೀನಿನ ಭೂದಾಖಲೆಗಳು ಲಭ್ಯವಿರಬೇಕು.<br>5. ನಂತರ ಮೋಜಿಣಿ ತಂತ್ರಾಂಶದ ಮುಖಾಂತರ ಆನ್ ಲೈನ್ ನಲ್ಲಿ FIFO (ಸರತಿ ಸಾಲಿನಂತೆ) ಅಳತೆಗಾಗಿ ಭೂಮಾಪಕರಿಗೆ ತಂತ್ರಾಂಶದ ಮೂಲಕ ಹಂಚಿಕೆಯಾಗುತ್ತದೆ.<br>ಅರ್ಜಿದಾರರು ಅಳತೆ ವೇಳೆ ಗುರುತಿನ ಚೀಟಿಯೊಂದಿಗೆ ಹಾಜರಿದ್ದು ತಮ್ಮ ಅನುಭವ ತೋರಿಸಬೇಕು. ಅರ್ಜಿದಾರರ ಹಕ್ಕು ಮತ್ತು ಅನುಭವ ಆಧರಿಸಿ ನಿಯಮಾನುಸಾರ ಅಳತೆ ಮಾಡಿ ದಾಖಲೆ ತಯಾರಿಸಿ, ನಂತರ ಕಡತವನ್ನು ಅಪ್‌ಲೋಡ್ ಹಾಗೂ ಪರಿಶೀಲನೆ ಮತ್ತು ಅನುಮೋದನೆಯನ್ನು ಸಹ ಆನ್ ಲೈನ್ ಮೂಲಕ ನಿರ್ವಹಿಸಲಾಗುತ್ತದೆ. ತಂತ್ರಾಂಶದ ಪ್ರತಿ ಹಂತದಲ್ಲಿಯೂ FIFO (ಸರತಿ ಸಾಲಿನಂತೆ) ಅಳವಡಿಸಲಾಗಿದ್ದು ಪ್ರಕರಣಗಳ ವಿಲೇವಾರಿಯಲ್ಲಿ ಯಾವುದೇ ಕಾಲ ವಿಳಂಬಕ್ಕೆ ಅವಕಾಶವಿಲ್ಲದಂತೆ ಕ್ರಮವಹಿಸಲಾಗುತ್ತಿದೆ.<br>ಭೂಮಾಪನ ಇಲಾಖೆಯಲ್ಲಿ ಪೋಡಿ ಕಾರ್ಯಕ್ಕಾಗಿ ಪ್ರತ್ಯೇಕ ಭೂಮಾಪಕರ ತಂಡವಿರುವುದಿಲ್ಲ, ಆದರೆ ಇಲಾಖೆಯಲ್ಲಿ ಜಾರಿಯಲ್ಲಿರುವ ದರಖಾಸ್ತು ಪೋಡಿ ಆಂದೋಲನ, ಸ್ವಾಮಿತ್ವ, ನಕ್ಷಾ ಯೋಜನೆ, ಕಂದಾಯ ಅರಣ್ಯ ಜಮೀನು ಅಳತೆ ಇತ್ಯಾದಿ ಪ್ರಮುಖ ಯೋಜನೆಗಳ ಜೊತೆಯಲ್ಲಿ ಲಭ್ಯ ಭೂಮಾಪಕರನ್ನು ಬಳಸಿಕೊಂಡು ಪ್ರಥಮ ಆದ್ಯತೆ ಮೇರೆಗೆ ದರಖಾಸ್ತು ಪೋಡಿ, ಮ್ಯುಟೇಷನ್ ಪೋಡಿ, ಪೋಡಿ ಮುಕ್ತ ಗ್ರಾಮ ಯೋಜನೆ, ಬಗರ್ ಹುಕುಂ ಪೋಡಿ, ಕೋರ್ಟ್ ಆದೇಶ ಇತ್ಯಾದಿ ಪ್ರಕರಣಗಳನ್ನು ಅಳತೆ ಮಾಡಲಾಗುತ್ತಿದೆ. |
| ಇ) | ಬಾಕಿ ಇರುವ ಅರ್ಜಿಗಳನ್ನು ತಕ್ಷಣ ವಿಲೇವಾರಿ ಮಾಡಬೇಕೆಂದು ಸರ್ಕಾರ ಸೂಚನೆ ನೀಡಿದೆಯೆ; | ಸರ್ಕಾರವು ತತ್ಕಾಲ್ ಪೋಡಿ ಪ್ರಕರಣಗಳ ವಿಲೇವಾರಿಯ ಕುರಿತು ಸಲ್ಲಿಕೆಯಾಗುವ ಅರ್ಜಿಗಳಲ್ಲಿ ಯಾವುದೇ ಸಮಸ್ಯೆಗಳಿಲ್ಲದೇ ಅಳತೆಗೆ ಯೋಗ್ಯವಿದ್ದಲ್ಲಿ ಅಂತಹ ಪ್ರಕರಣಗಳನ್ನು ಹಂಚಿಕೆಯಾದ ದಿನಾಂಕದಿಂದ 45 ದಿನಗಳಲ್ಲಿ ಇತ್ಯರ್ಥಪಡಿಸಲು ಕಾಲಮಿತಿ |

| ಕ್ರ. ಸಂ | ಪ್ರಶ್ನೆ | ಉತ್ತರ |
| --- | --- | --- |
| | ನೀಡಿದ್ದಲ್ಲಿ 2026, ಜನವರಿ ಅಂತ್ಯದವರೆಗೆ ಎಷ್ಟು ಅರ್ಜಿಗಳು ಇತ್ಯರ್ಥಗೊಂಡಿವೆ; (ಜಿಲ್ಲಾವಾರು ವಿವರ ನೀಡುವುದು); | ನಿಗದಿಪಡಿಸಲಾಗುತ್ತಿದೆ.<br>ಜನವರಿ-2026 ರ ಅಂತ್ಯಕ್ಕೆ ಇತ್ಯರ್ಥ/ವಿಲೇಗೊಳಿಸಿರುವ ಅರ್ಜಿಗಳ ಜಿಲ್ಲಾವಾರು ವಿವರವನ್ನು ಮೇಲ್ಕಂಡ **ಅನುಬಂಧ**ದಲ್ಲಿಯೇ ನಮೂದಿಸಿ ನೀಡಿದೆ. |
| ಈ) | ಸರ್ಕಾರದ ಸೂಚನೆಯನ್ನು ಪಾಲಿಸದೆ ಅನಗತ್ಯವಾಗಿ ಅರ್ಜಿಗಳನ್ನು ಇತ್ಯರ್ಥ ಮಾಡುವಲ್ಲಿ ವಿಳಂಬ ಧೋರಣೆ ಅನುಸರಿಸುತ್ತಿರುವ ಎಷ್ಟು ಅಧಿಕಾರಿಗಳ ಮೇಲೆ ಸರ್ಕಾರ ಕ್ರಮ ಕೈಗೊಂಡಿದೆ; | ಸರ್ಕಾರದ ಸೂಚನೆಯನ್ನು ಪಾಲಿಸದೆ ಅನಗತ್ಯವಾಗಿ ಅರ್ಜಿಗಳನ್ನು ಇತ್ಯರ್ಥ ಮಾಡುವಲ್ಲಿ ವಿಳಂಬ ಧೋರಣೆ ಅನುಸರಿಸುತ್ತಿರುವ ಭೂಮಾಪನ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳು ಪೋಡಿ ಪ್ರಕರಣಗಳ ವಿಲೇವಾರಿಗೆ ವಿಳಂಬ ಮಾಡುತ್ತಿರುವ ಅಥವಾ ವಿಫಲರಾದ ಬಗ್ಗೆ ಸಾರ್ವಜನಿಕರಿಂದ ನಿರ್ದಿಷ್ಟವಾದ ದೂರುಗಳು ಸ್ವೀಕೃತವಾದ ತಕ್ಷಣ ಸಂಬಂಧಿಸಿದ ಅಧಿಕಾರಿ/ಸಿಬ್ಬಂದಿಗಳು ವರದಿ ಪಡೆದು, ಇಲಾಖಾ ವಿಚಾರಣೆ ನಡೆಸಿ KCSR ಹಾಗೂ CCA ನಿಯಮಗಳಡಿಯಲ್ಲಿ ತಪ್ಪಿತಸ್ಥ ಅಧಿಕಾರಿ/ನೌಕರರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗುತ್ತದೆ. |
| ಉ) | ಪೋಡಿ ಅರ್ಜಿಗಳ ವಿಲೇವಾರಿ ವಿಳಂಬದಿಂದಾಗಿ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಬಾಕಿ ಇರುವ ಅರ್ಜಿಗಳನ್ನು ಯಾವ ಕಾಲಮಿತಿಯಲ್ಲಿ ಇತ್ಯರ್ಥ ಪಡಿಸಲಾಗುವುದು? | ಪೋಡಿ ಅರ್ಜಿಗಳ ಶೀಘ್ರ ವಿಲೇವಾರ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳುವುದರ ಮೂಲಕ ಸರ್ಕಾರವು ಪೋಡಿ ಪ್ರಕರಣಗಳ ವಿಲೇವಾರಿಯ ಕುರಿತು ಸಲ್ಲಿಕೆಯಾಗುವ ಅರ್ಜಿಗಳಲ್ಲಿ ಯಾವುದೇ ಸಮಸ್ಯೆಗಳಿಲ್ಲದೇ ಅಳತೆಗೆ ಯೋಗ್ಯವಿದ್ದಲ್ಲಿ ಅಂತಹ ಪ್ರಕರಣಗಳನ್ನು ಹಂಚಿಕೆಯಾದ ದಿನಾಂಕದಿಂದ 45 ದಿನಗಳಲ್ಲಿ ಇತ್ಯರ್ಥಪಡಿಸಲು ಕಾಲಮಿತಿ ನಿಗದಿಪಡಿಸಲಾಗುತ್ತಿದೆ.<br>1. ಇಲಾಖೆಯಲ್ಲಿ ಅಳತೆ ಕೋರಿ ಸ್ವೀಕೃತವಾಗುವ ಎಲ್ಲಾ ಅರ್ಜಿಗಳನ್ನು ಮೋಜಿಣಿ ತಂತ್ರಾಂಶದ ಮುಖಾಂತರ ಆನ್ ಲೈನ್ ಮೂಲಕ ಸ್ವೀಕರಿಸಲಾಗುತ್ತಿದ್ದು, ಮೋಜಿಣಿ ತಂತ್ರಾಂಶದ ಮೂಲಕವೇ ಅಳತೆಗಾಗಿ ಭೂಮಾಪಕರಿಗೆ ಹಂಚಿಕೆ ಮಾಡಿ, ಅಳತೆಯಾದ ನಂತರ ಕಡತಗಳನ್ನು ಅಪ್‌ಲೋಡ್ ಮಾಡಲು ಹಾಗೂ ಅಪ್‌ಲೋಡ್ ಮಾಡಿರುವ ಕಡತಗಳ ಪರಿಶೀಲನೆ ಮತ್ತು ಅನುಮೋದನೆಯನ್ನು ಸಹ ತಂತ್ರಾಂಶದ ಮುಖಾಂತರ ಆನ್‌ಲೈನ್ ಮೂಲಕ ಸರದಿ ಸಾಲಿನಂತೆ (FIFO) ನಿರ್ವಹಿಸುವ ಮೂಲಕ, ಪ್ರಕರಣಗಳ ವಿಲೇವಾರಿಯಲ್ಲಿ ಯಾವುದೇ ವಿಳಂಬಕ್ಕೆ ಅವಕಾಶವಿಲ್ಲದಂತೆ ಕ್ರಮ ವಹಿಸಲಾಗುತ್ತಿದೆ.<br>2. ಕಂದಾಯ ಇಲಾಖೆಯಿಂದ ಪಹಣಿ ತಿದ್ದುಪಡಿ ಕುರಿತು ಕಂದಾಯ ಅದಾಲತ್ ಗಳನ್ನು ನಡೆಸಲಾಗುತ್ತಿದೆ.<br>3. ವಿಡಿಯೋ ಸಂವಾದ ಮತ್ತು ವಿಭಾಗವಾರು ಅಧಿಕಾರಿಗಳ ಸಭೆ ನಡೆಸಿ ಪ್ರಗತಿ ಪರಿಶೀಲನೆ ಮಾಡಿ ಹೆಚ್ಚಿನ ಪ್ರಗತಿ ಸಾಧಿಸಲು ಸೂಕ್ತ ಮಾರ್ಗದರ್ಶನ ಮತ್ತು ಅಗತ್ಯ ಸೂಚನೆ ನೀಡಲಾಗುತ್ತಿದೆ.<br>4. ಹೆಚ್ಚಿನ ಪ್ರಕರಣಗಳು ಬಾಕಿ ಇರುವ ತಾಲ್ಲೂಕುಗಳಿಗೆ ಕಡಿಮೆ |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಪ್ರಕರಣಗಳು ಬಾಕಿ ಇರುವ ತಾಲ್ಲೂಕಿನಿಂದ ಭೂಮಾಪಕರನ್ನು ನಿಯೋಜನೆ ಮಾಡಿ ಪ್ರಕರಣಗಳನ್ನು ವಿಲೇಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>5. ಅಳತೆ ಕಾರ್ಯವನ್ನು ತ್ವರಿತವಾಗಿ ನಿರ್ವಹಿಸಲು ರೋವರ್ ಉಪಕರಣಗಳನ್ನು ಹಂತ ಹಂತವಾಗಿ ಖರೀದಿಸಿ ಒದಗಿಸಲಾಗುತ್ತಿದೆ. ಈಗಾಗಲೇ ಸುಮಾರು 590 ರೋವರ್ ಗಳನ್ನು ಒದಗಿಸಲಾಗಿದೆ. |

**ಸಂಖ್ಯೆ: ಕಂಇ 49 ಎಸ್ಎಸ್‌ಸಿ 2026**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

# ಅನುಭಂದ

LAQ – 926

**ಕಳೆದ 3 ವರ್ಷಗಳಲ್ಲಿ ಸಲ್ಲಿಕೆಯಾಗಿ ಇತ್ಯರ್ಥವಾದ, ತಿರಸ್ಕರಿಸಿರುವ ಮತ್ತು ಬಾಕಿ ಇರುವ ಅರ್ಜಿಗಳ ಜಿಲ್ಲಾವಾರು ಪ್ರಗತಿಯನ್ನು**

| ಕ್ರ | ಜಿಲ್ಲೆ | ಪ್ರಾ ಶೀಲ್ಕು | ಸ್ವೀಕೃತಿ | ಒಟ್ಟು | ವಿಲೇ | | | ಬಾಕಿ |
|---|---|---|---|---|---|---|---|---|
| | | | | | ಅಳತೆ ತಿರಸ್ಕರಿಸಿರುವ ಅರ್ಜಿಗಳು | ಅಳತೆ ಪೂರ್ಣ ಗೊಳಿಸಿರುವ ಅರ್ಜಿಗಳು | ಒಟ್ಟು ವಿಲೇ | |
| 1 | ಬೆಳಗಾವ | 8252 | 56332 | 64584 | 16586 | 38214 | 54800 | 9784 |
| 2 | ಬಾಗಲಕೋಟೆ | 1226 | 24312 | 25538 | 8333 | 11903 | 20236 | 5302 |
| 3 | ಬಿಜಾಪುರ | 4403 | 38071 | 42474 | 10192 | 25151 | 35343 | 7131 |
| 4 | ಗುಲ್ಬರ್ಗ | 6431 | 46725 | 53156 | 16355 | 27933 | 44288 | 8868 |
| 5 | ಬೀದರ್ | 5168 | 37026 | 42194 | 11615 | 22378 | 33993 | 8201 |
| 6 | ರಾಯಚೂರು | 8492 | 56486 | 64978 | 23044 | 32058 | 55102 | 9876 |
| 7 | ಕೊಪ್ಪಳ | 5673 | 27908 | 33581 | 10840 | 16866 | 27706 | 5875 |
| 8 | ಗದಗ | 1354 | 12037 | 13391 | 4594 | 6308 | 10902 | 2489 |
| 9 | ಧಾರವಾಡ | 1596 | 6375 | 7971 | 1501 | 4615 | 6116 | 1855 |
| 10 | ಉತ್ತರಕನ್ನಡ | 1777 | 13951 | 15728 | 3333 | 9752 | 13085 | 2643 |
| 11 | ಹಾವೇರಿ | 1481 | 32776 | 34257 | 18054 | 10480 | 28534 | 5723 |
| 12 | ಬಳ್ಳಾರಿ | 2619 | 14609 | 17228 | 3480 | 10983 | 14463 | 2765 |
| 13 | ಚಿತ್ರದುರ್ಗ | 3942 | 45505 | 49447 | 22110 | 19190 | 41300 | 8147 |
| 14 | ದಾವಣಗೆರೆ | 4805 | 39801 | 44606 | 19084 | 17562 | 36646 | 7960 |
| 15 | ಶಿವಮೊಗ್ಗ | 5740 | 25208 | 30948 | 5974 | 17471 | 23445 | 7503 |
| 16 | ಉಡುಪಿ | 3089 | 30666 | 33755 | 4858 | 21966 | 26824 | 6931 |
| 17 | ಚಿಕ್ಕಮಗಳೂರು | 4919 | 28083 | 33002 | 4953 | 22961 | 27914 | 5088 |
| 18 | ತುಮಕೂರು | 10337 | 87226 | 97563 | 31056 | 50119 | 81175 | 16388 |
| 19 | ಕೋಲಾರ | 4525 | 29737 | 34262 | 10453 | 16096 | 26549 | 7713 |
| 20 | ಬೆಂಗಳೂರು ಜಿಲ್ಲೆ | 5992 | 20890 | 26882 | 4516 | 16292 | 20808 | 6074 |
| 21 | ಬೆಂಗಳೂರು (ಗ್ರಾ ) | 4675 | 31806 | 36481 | 12241 | 18276 | 30517 | 5964 |
| 22 | ಮಂಡ್ಯ | 10640 | 65521 | 76161 | 14320 | 47932 | 62252 | 13909 |
| 23 | ಹಾಸನ | 6522 | 75892 | 82414 | 19325 | 53871 | 73196 | 9218 |
| 24 | ದಕ್ಷಿಣ ಕನ್ನಡ | 5626 | 36382 | 42008 | 9395 | 24431 | 33826 | 8182 |
| 25 | ಕೊಡಗು | 1983 | 14005 | 15988 | 609 | 13679 | 14288 | 1700 |
| 26 | ಮೈಸೂರು | 6812 | 51951 | 58763 | 16748 | 32140 | 48888 | 9875 |
| 27 | ಚಾಮರಾಜನಗರ | 2178 | 16252 | 18430 | 5012 | 10363 | 15375 | 3055 |
| 28 | ಚಿಕ್ಕಬಳ್ಳಾಪುರ | 6499 | 29750 | 36249 | 6294 | 24594 | 30888 | 5361 |
| 29 | ಬೆಂಗಳೂರು ದಕ್ಷಿಣ | 4073 | 36495 | 40568 | 12535 | 19496 | 32031 | 8537 |
| 30 | ಯಾದಗಿರ್ | 1660 | 39971 | 41631 | 23252 | 11669 | 34921 | 6710 |
| 31 | ವಿಜಯನಗರ | 797 | 16566 | 17363 | 5731 | 8883 | 14614 | 2749 |
| | **ಒಟ್ಟು** | **143286** | **1088315** | **1231601** | **356393** | **663632** | **1020025** | **211576** |